2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂ: 13/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - ಸೋಮಶೇಖರ್ | | ಪಿಡಬ್ಲೂ - 12 |
| ತಂದೆಯ ಹೆಸರು | - ರಾಜೇಗೌಡ | | ಸಿಡಬ್ಲೂ - 17 |
| ವಯಸ್ಸು | - 31 ವರ್ಷ | | |
| ಉದ್ಯೋಗ | - ಗಾರೆಕೆಲಸ | | |
| ವಾಸ ಸ್ಥಳ | - ಅಂಬಳೆ, ಚಿಕ್ಕಮಗಳೂರು | | |

ದಿನಾಂಕ: **11.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಚಾಸಾ.1 ಮಂಜುಳ ನಮ್ಮ ಊರಿನವಳು. ಆರೋಪಿತನ ಪರಿಚಯ ಇದೆ.

2. ಈಗ ನೋಡುತ್ತಿರುವ ನಿಪಿ.12 ರಲ್ಲಿ ನನ್ನ ಸಹಿ ಇದೆ, ಸಾಕ್ಷಿಯ ಸಹಿಯನ್ನು ನಿಪಿ.12(ಬಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನೋಟೀಸಿನಲಿ ನನ್ನ ಸಹಿ ಇದೆ, ನೋಟೀಸನ್ನು ನಿಪಿ.25 ಎಂದು ಸಾಕ್ಷಿಯ ಸಹಿಯನ್ನು ನಿಪಿ.25(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರ ಈಗಾಗಲೇ ನಿಪಿ.13 ಎಂದು ಗುರುತಿಸಲಾಗಿದೆ.

3. ನಿಪಿ.12 ಮತ್ತು 25 ಕ್ಕೆ ಸುಮಾರು 5 ವರ್ಷಗಳ ಹಿಂದೆ ಕಡೂರು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಾನು ಪೋಲೀಸ್ ಠಾಣೆಗೆ ಹೋದಾಗ ಪೋಲೀಸರು ನಿಪಿ.12 ಮತ್ತು 25 ಕ್ಕೆ ನನ್ನ ಸಹಿ ಪಡೆದಿದ್ದಾರೆ. ಚಾಸಾ.1 ಮಂಜುಳ ಆರೋಪಿಯ ಜೊತೆ ಆದ ಮದುವೆಯ ಭಾವಚಿತ್ರ ಮತ್ತು ಮದುವೆಯ ಪ್ರಮಾಣಪತ್ರ ಹಾಜರುಪಡಿಸಿದ ಹಿನ್ನೆಲೆಯಲ್ಲಿ ಪೋಲೀಸರು ನನ್ನ ಸಹಿ ಪಡೆದಿದ್ದಾರೆ. ಚಾಸಾ.1 ರವರು ಹಾಜರುಪಡಿಸಿದ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.10 ಮತ್ತು 11 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು: ಶ್ರೀ ಐ.ಎಸ್.ಟಿ., ವಕೀಲರಿಂದ ಆರೋಪಿ ಪರವಾಗಿಃ

4. ಚಾಸಾ.1 ರವರು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು. ಚಾಸಾ.1 ನನ್ನ ಸಂಬಂಧಿಕಳಲ್ಲ. ಚಾಸಾ.1 ರವರು ಮದುವೆಯ ನೋಂದಣಿ ಪ್ರಮಾಣಪತ್ರ ಪೋಲೀಸರಿಗೆ ನೀಡಬೇಕಾಗಿದೆ ಎಂದು ಹೇಳಿ ನನ್ನನಲ್ಲು ಕರೆದುಕೊಂಡು ಹೊಗೀದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ದಾಖಲೆಗಳನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ದಾಖಲೆ ನೋಡಿಲ್ಲ. ನಿಪಿ.10 ರ ಮೂಲ ದಾಖಲೆ ನಾನು ನೋಡಿರುವುದಿಲ್ಲ. ನಿಪಿ.11 ರ ಬಾಬ್ತು ನೆಗೆಟಿವ್ ಅಥವ ಮೆಮೊರಿ ಕಾರ್ಡನ್ನು ಚಾಸಾ.1 ಹಾಜರುಪಡಿಸಲಿಲ್ಲ.

5. ನಿಪಿ.12 ಮತ್ತು 25 ರ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೀಗ ನೆನಪಿಲ್ಲ. ಈ ದಿನ ಚಾಸಾ.1 ನ್ಯಾಯಾಲಯಕ್ಕೆ ಬಂದಿದ್ದಾರೆ. ಚಾಸಾ.1 ರವರ ಮಾತಿನ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ